771 (1107) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯನ್ನು ಅಧಿಕ ತೇವಾಂಶದಿಂದ ರೇಷ್ಮೆ ಬೆಳೆಗೆ ತೊಡಕಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಇದರಿಂದ ರೇಷ್ಮೆ ಕೃಷಿಕರಿಗೆ ಮತ್ತು ರೀಲರುಗಳಿಗೆ ಅರ್ಥಿಕ ನಷ್ಟವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಬಂದಿದ್ದಲ್ಲಿ, ಈ ಭಾಗದ ರೇಷ್ಮೆ ಬೆಳೆಗಾರರಿಗೆ ರೀಲರುಗಳಿಗೆ ಡಿ–ಹ್ಯುಮಿಡಿಫೈಯರನ್ನು (ಶೈತ್ಯಾಂಶ ದೂರಿಕರಣ ಯಂತ್ರ) ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅಧಿಕ ಮಳೆಯ ನಿಮಿತ್ತ ಹಾಗೂ ಕರಾವಳಿ ವಾತಾವರಣ ಹೊಂದಿರುವುದರಿಂದ ವಾತಾವರಣದಲ್ಲಿ ಶೈತ್ಯಾಂಶದ ಪ್ರಮಾಣವು ಅಧಿಕವಾಗಿರುತ್ತದೆ ವೈಜ್ಞಾನಿಕವಾಗಿ ರೇಷ್ಮೆ ಹುಳು ಸಾಕಾಣಿಕೆಯ ವಿವಿಧ ಹಂತಗಳಲ್ಲಿ ಅವಶ್ಯಕವಾಗಿರುವ ಉಷ್ಣಾಂಶ ಹಾಗೂ ಶೈತ್ಯಾಂಶದ ಪ್ರಮಾಣಕ್ಕಿಂತ ಅಧಿಕವಾದಾಗ ಹುಳು ಸಾಕಾಣಿಕೆಯಲ್ಲಿ ತೊಡಕಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಈ ಕಾರಣಕ್ಕೆ ಉತ್ತರ ಕನ್ನಡ ಜಿಲ್ಲೆಯನ್ನು ದ್ವಿತಳಿ ಬಿತ್ತನೆ ಗೂಡು ಬೆಳೆಯುವ ಪ್ರದೇಶವೆಂದು ಗುರುತಿಸಲಾಗಿದ್ದು, ಬಿತ್ತನೆ ಗೂಡುಗಳ ಸಾಕಾಣಿಕೆಗೆ ಹೆಚ್ಚು ಒತ್ತು ನೀಡಲಾಗಿದೆ ವಾತಾವರಣದಲ್ಲಿ ಅಧಿಕ ಶೈತ್ಯಾಂಶವಿದ್ದಂತಹ ಸಮಯದಲ್ಲಿ, ಹಣ್ಣಾದ ಹುಳುಗಳು ಕಟ್ಟಿದ ಗೂಡುಗಳು ನೂಲು ಬಿಚ್ಚಾಣಿಕೆಗೆ ಸೂಕ್ತವಾಗಿರುವುದಿಲ್ಲವಾದ್ದರಿಂದ ವಾಣಿಜ್ಯ ಬೆಳೆಯನ್ನು ಹೆಚ್ಚಾಗಿ ಪ್ರೋತ್ಸಾಹಿಸುತ್ತಿಲ್ಲ ಇದಲ್ಲದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನೂಲು ಬಿಚ್ಚಾಣಿಕೆ ಚಟುವಟಿಕೆಯು ಅಭಿವೃದ್ಧಿ ಹೊಂದಿರುವುದಿಲ್ಲ ಕೇವಲ ಒಬ್ಬರೆ ಕುಮಟಾ ತಾಲ್ಲೂಕಿನಲ್ಲಿ ನೂರು ಬಿಚ್ಚಾಣಿಕೆಯಲ್ಲಿ ತೊಡಗಿದ್ದು, ಅವರು ತಮ್ಮ ಘಟಕದಲ್ಲಿ ಅನುಕೂಲಕರ ಋತುಗಳಲ್ಲಿ ಮಾತ್ರ ನೂಲು ಬಿಚ್ಚಾಣಿಕೆಯನ್ನು ಮಾಡುತ್ತಿದ್ದು, ಶೈತ್ಯಾಂಶವನ್ನು ಕಡಿಮೆ ಮಾಡಲು ಇದ್ದಿಲು ಬಳಕೆ ಮಾಡುತ್ತಿರುತ್ತಾರೆ ಅಲ್ಲದೆ ಒಣ ಪ್ರದೇಶಗಳಾದ ಧಾರವಾಡ, ಹಾವೇರಿ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ ಗೂಡುಗಳನ್ನು ಖರೀದಿಸಿ ನೂಲು ಬಿಚ್ಚಾಣಿಕೆ ಮಾಡುತ್ತಿರುತ್ತಾರೆ ಬಿತ್ತನೆ ಗೂಡು ಬೆಳೆಯುವ ರೈತರಿಗೂ ವಾತಾವರಣದಲ್ಲಿರುವ ಶೈತ್ಯಾಂಶವನ್ನು ನಿರ್ವಹಿಸಲು ಅಗತ್ಯವಿರುವ ತಂತ್ರಜ್ಞಾನವನ್ನು ಹೇಳಿಕೊಡಲಾಗಿದ್ದು, ಅವರು ಹುಳು ಸಾಕಾಣಿಕೆ ಮನೆಗಳಲ್ಲಿ ಸುಣ್ಣ/ಇದ್ದಿಲು ಬಳಕೆಯಿಂದ ಈ ಸಮಸ್ಯೆಯನ್ನು ಪರಿಹರಿಸಿಕೊಂಡಿರುತ್ತಾರೆ ಉತ್ತರ ಕನ್ನಡ ಜಿಲ್ಲೆ ಸಿರಸಿಯ ಬಿತ್ತನೆ ಗೂಡುಗಳ ಗುಣಮಟ್ಟ ಉತ್ತಮವಾಗಿರುವುದರಿಂದ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯನ್ನು ಹೊಂದಿರುವುದು ಗಮನಾರ್ಹ

ಮಳೆಗಾಲದಲ್ಲಿ ಕೃಷಿಕರು ರೇಷ್ಮೆ ಹುಳುವನ್ನು ಸಾಕಲು ಸಾಧ್ಯವಾಗದಿರುವುದರಿಂದ ಆ ಒಂದು ಋತುವಿನಲ್ಲಿ ರೇಷ್ಮೆ ಕೃಷಿಕರಿಗೆ ಆದಾಯ ಕಡಿಮೆಯಾಗಿ ತೊಂದರೆಯಾಗುತ್ತಿದೆ

ಇ) ವಾತಾವರಣದ ಶೈತ್ಯಾಂಶವನ್ನು ನಿರ್ವಹಿಸಲು ಇದ್ದಂತಹ ತಂತ್ರಜ್ಞಾನಗಳನ್ನು ರೇಷ್ಮೆ ಕೃಷಿಕರಿಗೆ ಹೇಳಿಕೊಡಲಾಗುತ್ತಿದೆ ಪ್ರತ್ಯೇಕ ಮೌಂಟಿಂಗ್ ಹಾಲ್ ನಿರ್ಮಿಸಲು ರೇಷ್ಮೆ ವರದಾನ ಯೋಜನೆಯಡಿ ಸಹಾಯಧನ ಅವಕಾಶವನ್ನು ಕಲ್ಪಿಸಲಾಗಿದ್ದು, ಇವುಗಳಲ್ಲಿ ಎಕ್ಸಾಸ್ಟ್ ಫ್ಯಾನುಗಳನ್ನು (exhaust fan) ಅಳವಡಿಸಲು ಸೂಚಿಸಲಾಗುತ್ತಿದೆ ಡಿ–ಹ್ಯುಮಿಡಿಫೈಯರ್ ತಂತ್ರಜ್ಞಾನವನ್ನು ಸಂಶೋಧನಾ ಸಂಸ್ಥೆಗಳು ಶಿಫಾರಸ್ಸು ಮಾಡಿರುವುದಿಲ್ಲ, ಡಿ–ಹ್ಯುಮಿಡಿಫೈಯರ್ ತಾಂತ್ರಿಕತೆಯು ಹುಳು ಸಾಕುವ ಮನೆಯ ಹವಾನಿಯಂತ್ರಿತ (Air conditioning) ವ್ಯವಸ್ಥೆಗೆ ಸಮನಾಗಿರುವುದಲ್ಲದೆ ವಿದ್ಯುಚ್ಛಕ್ತಿ ನಿರಂತರವಾಗಿ ಲಭ್ಯವಾಗಬೇಕಾಗುತ್ತದೆ ಮೇಲಾಗಿ ಇದರಿಂದ ಗೂಡಿನ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ ಆದ್ದರಿಂದ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್‌ಗಳಲ್ಲಿ ಹೆಚ್ಚಿನ ಗಾಳಿ ಸಂಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಎಕ್ಸಾಸ್ಟ್ ಬಳಕೆ ಹಾಗೂ ಸುಣ್ಣದ ಬಳಕೆಯಂತಹ ಕಡಿಮೆ ವೆಚ್ಚದ ತಾಂತ್ರಿಕತೆಗಳನ್ನು ಶಿಫಾರಸ್ಸು ಮಾಡಲಾಗಿದ್ದು, ಈ ಬಗ್ಗೆ ಎಲ್ಲಾ ಬೆಳೆಗಾರರಿಗೆ ತಿಳುವಳಿಕೆ ನೀಡಲಾಗುತ್ತಿದೆ

772 (1103) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಜೀವಿ ಪ್ರಮಾಣ ಪತ್ರವನ್ನು ಸರ್ಕಾರಿ ನೌಕರರಿಗೆ ಮಾತ್ರ ನೀಡುವ ಬಗ್ಗೆ ಆದೇಶವಾಗಿರುವುದು ನಿಜವೇ ,

ಆ) ಸರ್ಕಾರಿ ನೌಕರರಲ್ಲದ ಹಲವಾರು ನಾಗರೀಕರಿಗೆ ಈ ಪ್ರಮಾಣ ಪತ್ರದ ಅವಶ್ಯಕತೆಯಿಂದಾಗಿ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಸಮಾಜದ ಎಲ್ಲಾ ನಾಗರೀಕರಿಗೂ ಉತ್ತರ ಜೀವಿ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಸರ್ಕಾರದ ಗಮನಕ್ಕೆ ಬಂದಿದೆ

ಇ) ಪರಿಶೀಲಿಸಲಾಗುತ್ತಿದೆ

773 (1104) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇರೆ ಬೇರೆ ಇಲಾಖೆಗಳಿಂದ ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು (ಕಲ್ಲುಕಣಿ, ಕ್ವಾರಿ ರಸ್ತೆ ನಿರ್ಮಾಣದ ಅಗಲೀಕರಣ, ಚೆಕ್ ಡ್ಯಾಂ